# Visvesvaraya Technological University

"JnanaSangama" Belagavi-590018, Karnataka State, India

**Dr. A. S. Deshpande** B.E., M.Tech., Ph.D.
Registrar

Phone: (0831) 2498100
Fax: (0831) 2405467


Ref: VTU/Aca/A-9/2020-21/ 2350 Dated: 19 SEP 2020

## ಸುತ್ತೋಲೆ

**ವಿಷಯ: "ಕನ್ನಡ ಭಾಷಾ ಬೋಧನೆಯ ಪಠ್ಯಪುಸ್ತಕಗಳನ್ನು ಕಳುಹಿಸಿ ಕೊಡುತ್ತಿರುವ ಕುರಿತು".**

ಕರ್ನಾಟಕ ಸರ್ಕಾರದಿಂದ ರಚಿಸಲ್ಪಟ್ಟ ಕಡ್ಡಾಯ ಕನ್ನಡ ಭಾಷಾ ಬೋಧನೆ ಅನುಷ್ಠಾನ ಸಮಿತಿ ಮತ್ತು ಸರ್ಕಾರದ ತಾಂತ್ರಿಕ ಶಿಕ್ಷಣ ಪಠ್ಯ ಪುಸ್ತಕ ರಚನಾ ಸಮಿತಿಯವರು ನೀಡಿದ ಸಲಹೆಯಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಕನ್ನಡ ಭಾಷಾ ಬೋಧನೆಯ ಸಂಬಂಧ ಎರಡು ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ಅಂದರೆ ಯಾರು 10ನೇ ತರಗತಿಯಲ್ಲಿ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರುತ್ತಾರೆ ಅಂತಹ ವಿದ್ಯಾರ್ಥಿಗಳಿಗೆ **"ಸಾಂಸ್ಕೃತಿಕ ಕನ್ನಡ"** ಎಂಬ ಸಾಂಸ್ಕೃತಿಕ ಪಠ್ಯವನ್ನು ಮತ್ತು ಹೊರರಾಜ್ಯದ/ ವಿದೇಶಿ/ ಕನ್ನಡ ಭಾಷೆಯನ್ನು 10ನೇ ತರಗತಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿಲ್ಲದ / ಎಲ್ಲಾ ಕನ್ನಡೇತರ ವಿದ್ಯಾರ್ಥಿಗಳಿಗೆ ಭಾಷಾ ಕಲಿಕಾ ಪಠ್ಯಪುಸ್ತಕವಾದ **"ಬಳಕೆ ಕನ್ನಡ"** ಪಠ್ಯವನ್ನು ಸಿದ್ಧಪಡಿಸಲಾಗಿರುತ್ತದೆ. ವಿಶ್ವವಿದ್ಯಾಲಯವು **ಈ ಎರಡು ಪಠ್ಯಪುಸ್ತಕಗಳನ್ನು** ಎಲ್ಲಾ ಸಂಯೋಜಿತ ಕಾಲೇಜುಗಳು / ಸ್ವಾಯತ್ತ (ಆಟಾನಮಸ್) ಕಾಲೇಜುಗಳು **ಅಧಿಕೃತ ಪಠ್ಯಪುಸ್ತಕಗಳಾಗಿದ್ದು ಎಲ್ಲರೂ ಕಡ್ಡಾಯವಾಗಿ** ಅಳವಡಿಸಿಕೊಳ್ಳಬೇಕೆಂದು ನಿರ್ದೇಶಿಸುತ್ತದೆ.

ಸದರಿ ಪಠ್ಯಪುಸ್ತಕಗಳನ್ನು **ಮೊದಲ ವರ್ಷದ ಮೊದಲನೇ/ಎರಡನೇ ಸೆಮಿಸ್ಟರ್ ಬಿಇ ಆರ್ಕಿಟೆಕ್ಚರ್ ನ ವಿದ್ಯಾರ್ಥಿಗಳಿಗೆ ಮತ್ತು ದ್ವಿತೀಯ ವರ್ಷದ ಮೂರು/ನಾಲ್ಕನೇ ಸೆಮಿಸ್ಟರ್ ನ ಬಿಇ/ಬಿಟೆಕ್/ಬಿಪ್ಲಾನ್ ವಿದ್ಯಾರ್ಥಿಗಳಿಗೆ** ಆನ್ ಲೈನ್ ( ) ಮಾದರಿಯ ಬೋಧನಾ ದೃಷ್ಟಿಯಿಂದ ಬೋಧನೆಗೆ ನೆರವಾಗಲು ಈಗ ವಿಶ್ವವಿದ್ಯಾಲಯದ ವೆಬ್ ಸೈಟ್ ನಲ್ಲಿ ಎರಡು ಪುಸ್ತಕಗಳ ಮೊದಲ ಭಾಗವನ್ನು ಮಾತ್ರ ಅಪ್ಲೋಡ್ ಮಾಡಲಾಗಿರುತ್ತದೆ. **ಪಠ್ಯಪುಸ್ತಕಗಳ ಸಾಫ್ಟ್ ಕಾಪಿಯನ್ನು** ವಿಶ್ವವಿದ್ಯಾಲಯದ **https://vtu.ac.in/en/b-e-scheme-syllabus/.**ವಿಳಾಸದಿಂದ ಡೌನ್ಲೋಡ್ ಮಾಡಿ ಕೊಳ್ಳಬಹುದಾಗಿರುತ್ತದೆ. ಇನ್ನು ಕೆಲವೇ ದಿನಗಳಲ್ಲಿ ಈ ಪುಸ್ತಕಗಳು ಪ್ರಸಾರಾಂಗದಿಂದ ಮುದ್ರಣಗೊಳ್ಳಲಿವೆ.

ಆದುದರಿಂದಾಗಿ ಮೇಲೆ ತಿಳಿಸಿದ ಎಲ್ಲಾ ಸಂಸ್ಥೆಗಳು ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯನ್ನು ಗಮದಲ್ಲಿಟ್ಟುಕೊಂಡು **ಪಠ್ಯಪುಸ್ತಕಗಳ ಬೇಡಿಕೆಯ ಪಟ್ಟಿಯನ್ನು** ಶೀಘ್ರವಾಗಿ ವಿಶ್ವವಿದ್ಯಾಲಯದ **academicsyl2018@gmail.com** ಇ-ಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ.

19.9.2020
ಕುಲಸಚಿವರು

**ಇವರಿಗೆ.**

ಪ್ರಾಚಾರ್ಯರು, ವಿ.ತಾ.ವಿ.ಯ ಎಲ್ಲ ಘಟಕ ಸ್ವಾಯತ್ತತೆ ಮತ್ತು ಸಂಯೋಜನೆಗೊಳಪಟ ಮಹಾವಿದ್ಯಾಲಯಗಳು.

**ಪ್ರತಿ ಇವರಿಗೆ,**

1) ಮಾನ್ಯ ಕುಲಪತಿಗಳು, ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ, ವಿ.ತಾ.ವಿ, ಬೆಳಗಾವಿ.
2) ಕುಲಸಚಿವರು (ಮೌಲ್ಯಮಾಪನ) ವಿ.ತಾ.ವಿ, ಬೆಳಗಾವಿ.
3) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ, ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
4) ವಿಶೇಷಾಧಿಕಾರಿಗಳು/ಕಛೇರಿ ಅಧೀಕ್ಷಕರು/ಕೇಸ್ ವರ್ಕರ್ಸ್,ಶೈಕ್ಷಣಿಕ ವಿಭಾಗ, ವಿ.ತಾ.ವಿ, ಬೆಳಗಾವಿ.